# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ - 591156

(ನ್ಯಾಕ್ ಮಾನ್ಯತೆB+ ಗ್ರೇಡ್ - 2021)

# RANI CHANNAMMA UNIVERSITY

Vidyasangama, National Highway - 04, Bhootaramanahatti, Belagavi - 591156

(NAAC Accredited with B+ Grade - 2021)

E-mail: rcuregistrar@gmail.com
registrar@rcub.sc.in

ಕುಲಸಚಿವರ ಕಾರ್ಯಾಲಯ
Office of the Registrar

Website:www.rcub.ac.in
Phone No.: 0831-2565208/19
0831-2565234


7

ಕ್ರಮಸಂಖ್ಯೆ: ರಾಚವಿ/ಬೆಳಗಾವಿ/ಸಿಡಿಸಿ/ /2022-23/305

ದಿನಾಂಕ:
20 SEP 2022

## ಅಧಿಸೂಚನೆ

ವಿಷಯ : 2022-23 ನೇ ಶೈಕ್ಷಣಿಕ ಸಾಲಿಗಾಗಿ ದಕ್ಷಿಣ ಕೊಂಕಣ ಶಿಕ್ಷಣ ಸಂಸ್ಥೆಯ. ಗೋವಿಂದರಾಮ ಸೆಕ್ಸಾರಿಯ ವಿಜ್ಞಾನ ಮಹಾವಿದ್ಯಾಲಯ. ತಿಲಕವಾಡಿ ಬೆಳಗಾವಿ. ಈಗಾಗಲೇ ಅಸ್ತಿತ್ವದಲ್ಲಿರುವ ಈ ಮಹಾವಿದ್ಯಾಲಯದಲ್ಲಿ ಎಂ.ಎಸ್ಸಿ. ಹೊಸ ಕೋರ್ಸ ಪ್ರಾರಂಭಿಸಲು ಸಂಯೋಜನಾ ಮಂಜೂರಾತಿ ನೀಡುವ ಕುರಿತು.

ಉಲ್ಲೇಖ:
1) ತಮ್ಮ ಮಹಾವಿದ್ಯಾಲಯದ ಸಂಯೋಜನಾ ಅರ್ಜಿ ದಿನಾಂಕ : 13-05-2022
2) ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ಅನುಮೋದನೆ ದಿನಾಂಕ:17-06-2022
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 17-06-2022
4) ಸರಕಾರಿ ಆದೇಶ ಸಂಖ್ಯೆ:ಇಡಿ 159 ಯುಆರ್‌ಸಿ 2022 ಬೆಂಗಳೂರು,ದಿನಾಂಕ:12-07-2022

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಕಲಂ 59(11)ರನ್ವಯ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಸೂಚಿಸಿದ ಅಂಕ ಹಾಗೂ ಮಾನದಂಡಗಳನ್ನು ಮತ್ತು ಸ್ಥಾನಿಕ ತನಿಖಾ ಸಮಿತಿಯು ವಿಧಿಸಿದ ನಿಬಂಧನೆಗಳನ್ನು ಪಾಲಿಸುವ ಷರತ್ತಿಗೆ ಒಳಪಟ್ಟು ವಿದ್ಯಾವಿಷಯಕ್ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ಅನುಮೋದನೆಯನ್ವಯ ಹಾಗೂ ಉಲ್ಲೇಖ-04 ರ ಸರಕಾರಿ ಆದೇಶದನ್ವಯ, ದಕ್ಷಿಣ ಕೊಂಕಣ ಶಿಕ್ಷಣ ಸಂಸ್ಥೆಯ. ಗೋವಿಂದರಾಮ ಸೆಕ್ಸಾರಿಯ ವಿಜ್ಞಾನ ಮಹಾವಿದ್ಯಾಲಯ, ತಿಲಕವಾಡಿ ಬೆಳಗಾವಿ. ಇಲ್ಲಿ ಈ ಕೆಳಗೆ ಕಾಣಿಸಿದ ಕೋರ್ಸ ಹಾಗೂ ವಿಷಯಗಳಿಗೆ ಶಾಶ್ವತ ಅನುದಾನರಹಿತ 2022-23 ನೇ ಶೈಕ್ಷಣಿಕ ಸಾಲಿನಿಂದ ಒಂದು ವರ್ಷದ ಅವಧಿಗಾಗಿ ಬೋಧಿಸಲು ಹೊಸ ಸಂಯೋಜನಾ ಮಂಜೂರಾತಿಯನ್ನು ನೀಡಲಾಗಿದೆ. ಮುಂದುವರೆದು ತಿಳಿಸುವುದೇನೆಂದರೆ ಸದರಿ ಮಹಾವಿದ್ಯಾಲಯದಲ್ಲಿಯ ಕೋರ್ಸಗಳ ಮಂಜೂರಾತಿಯು ಕೆ.ಎಸ್.ಯು ಆ್ಯಕ್ಟ 2000 ರ ಉಪ ಪ್ರಕರಣ 63(1) ರ ಮತ್ತು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ತಿಳಿಸಿದ್ದರ ಪ್ರಕಾರ ಷರತ್ತುಗೊಳಪಟ್ಟಿರುತ್ತದೆ.

| ಕೋರ್ಸ್ | ಸೆಮಿಸ್ಟರ್ | ಮೂಲ ವಿಷಯ ಮತ್ತು ಪ್ರವೇಶ ಮಿತಿ (ಪ್ರತಿ ಸೆಮಿಸ್ಟರ್‌ಗೆ) | ಐಚ್ಛಿಕ ವಿಷಯಗಳ ಸಮೂಹ ಮತ್ತು ಪ್ರವೇಶ ಮಿತಿ (ಪ್ರತಿ ಸೆಮಿಸ್ಟರ್‌ಗೆ) | |
|---|---|---|---|---|
| ಎಂ.ಎಸ್ಸಿ | 1 ಮತ್ತು 2 | ವಿಶ್ವವಿದ್ಯಾಲಯದ ಪಠ್ಯ ಕ್ರಮದಂತೆ ಎಲ್ಲಾ ಕಡ್ಡಾಯ ವಿಷಯಗಳು. | ಪರಿಸರ ವಿಜ್ಞಾನ | 20 |
| ಎಂ.ಎಸ್ಸಿ | 1 ಮತ್ತು 2 | ವಿಶ್ವವಿದ್ಯಾಲಯದ ಪಠ್ಯ ಕ್ರಮದಂತೆ ಎಲ್ಲಾ ಕಡ್ಡಾಯ ವಿಷಯಗಳು. | ಜೀವ ರಸಾಯನಶಾಸ್ತ್ರ | 20 |
| ಎಂ.ಎಸ್ಸಿ | 1 ಮತ್ತು 2 | ವಿಶ್ವವಿದ್ಯಾಲಯದ ಪಠ್ಯ ಕ್ರಮದಂತೆ ಎಲ್ಲಾ ಕಡ್ಡಾಯ ವಿಷಯಗಳು. | ಸೂಕ್ಷ್ಮ ಜೀವವಿಜ್ಞಾನ | 20 |

ಸೂಚನೆ : ಈ ಅಧಿಸೂಚನೆಯು ಸರಕಾರ ಹಾಗೂ ಸ್ಥಳೀಯ ತನಿಖಾ ಸಮಿತಿಯವರು ವಿಧಿಸಿದ ನಿಬಂಧನೆ ಮತ್ತು ಷರತ್ತಿಗೊಳಪಟ್ಟಿರುತ್ತದೆ.

No. 149
Date 20-09-22
BELGAUM

ಕುಲಸಚಿವರು

IQAC Co-ordinator
GSS College, Belagavi

Principal
G. S. Sc. College, Belagavi

Scanned with AnyScanner

ಕರ್ನಾಟಕ ಸರ್ಕಾರ

**ಕ್ರಮಾಂಕ**: ಇಡಿ 159 ಯುಆರ್‌ಸಿ 2022

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ 12.07.2022

**ಇಂದ**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ)
ಬೆಂಗಳೂರು.

**ಇವರಿಗೆ**
ಕುಲಸಚಿವರು.
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಮಾನ್ಯರೇ,**

**ವಿಷಯ**:- 2022-23ನೇ ಶೈಕ್ಷಣಿಕ ಸಾಲಿನಿಂದ ದಕ್ಷಿಣ ಕೊಂಕಣ ಶಿಕ್ಷಣ ಸಂಸ್ಥೆಯ ಗೋವಿಂದರಾಮ ಸೆಕ್ಸಾರಿಯಾ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ ಪೋಸ್ಟ್, ಬೆಳಗಾವಿ ತಾಲೂಕು ಮತ್ತು ಜಿಲ್ಲೆ, ಇಲ್ಲಿ ಹೊಸ ಕೋರ್ಸನ್ನು ಪ್ರಾರಂಭಿಸುವ ಬಗ್ಗೆ.

**ಉಲ್ಲೇಖ**:- ತಮ್ಮ ಪತ್ರ ಸಂಖ್ಯೆ: ರಾಚವಿ/ಬೆಳಗಾವಿ/ಸಿಡಿಸಿ/2022-23/165/29, ದಿನಾಂಕ 17.06.2022

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಶೈಕ್ಷಣಿಕ ಸಾಲಿನಿಂದ ದಕ್ಷಿಣ ಕೊಂಕಣ ಶಿಕ್ಷಣ ಸಂಸ್ಥೆಯ ಗೋವಿಂದರಾಮ ಸೆಕ್ಸಾರಿಯಾ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ ಪೋಸ್ಟ್, ಬೆಳಗಾವಿ ತಾಲೂಕು ಮತ್ತು ಜಿಲ್ಲೆ-590006, ಇಲ್ಲಿ ಹೊಸ ಕೋರ್ಸನ್ನು ಪ್ರಾರಂಭಿಸಲು ಸಂಯೋಜನೆ ಕೋರಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾವಿಷಯಕ ಪರಿಷತ್‌ನ ಸಮಾಲೋಚನೆಯೊಂದಿಗೆ ಸಿಂಡಿಕೇಟ್ ಮಾಡಿರುವ ಶಿಫಾರಸ್ಸನ್ನು ಆಧರಿಸಿ ಸಂವೀಕ್ಷಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪ್ರಕರಣ ಪ್ರಕರಣ 59ನೇ ಪ್ರಕರಣದ (11)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 2022-23ನೇ ಶೈಕ್ಷಣಿಕ ಸಾಲಿನಿಂದ ದಕ್ಷಿಣ ಕೊಂಕಣ ಶಿಕ್ಷಣ ಸಂಸ್ಥೆಯ ಗೋವಿಂದರಾಮ ಸೆಕ್ಸಾರಿಯಾ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ ಪೋಸ್ಟ್, ಬೆಳಗಾವಿ ತಾಲೂಕು ಮತ್ತು ಜಿಲ್ಲೆ-590006, ಇಲ್ಲಿ ಈ ಕೆಳಕಂಡಂತೆ ಹೊಸ ಕೋರ್ಸನ್ನು ಪ್ರಾರಂಭಿಸಲು **ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ನಿಬಂಧನೆಗಳು** ಹಾಗೂ **ಈ ಕೆಳಕಂಡ ಷರತ್ತಿಗೊಳಪಟ್ಟು** ಸಂಯೋಜನೆಯನ್ನು ಮಂಜೂರು ಮಾಡುವಂತೆ ಸರ್ಕಾರದ ಶಿಫಾರಸ್ಸನ್ನು ತಿಳಿಸಲು ನಿರ್ದೇಶಿತನಾಗಿದ್ದೇನೆ.

| **ಕೋರ್ಸು** | **ಭಾಷಾ ವಿಷಯ** | **ಐಚ್ಛಿಕ ವಿಷಯ** | **ಪ್ರವೇಶ ಮಿತಿ** |
|---|---|---|---|
| ಎಂ.ಎಸ್ಸಿ (ಪರಿಸರ ವಿಜ್ಞಾನ) | ವಿಶ್ವ ವಿದ್ಯಾಲಯದ ಪಠ್ಯಕ್ರಮದಂತೆ ಎಲ್ಲಾ ಕಡ್ಡಾಯ ವಿಷಯಗಳು | | 20 |
| ಎಂ.ಎಸ್ಸಿ (ಜೀವ ರಸಾಯನಶಾಸ್ತ್ರ) | ವಿಶ್ವ ವಿದ್ಯಾಲಯದ ಪಠ್ಯಕ್ರಮದಂತೆ ಎಲ್ಲಾ ಕಡ್ಡಾಯ ವಿಷಯಗಳು | | 20 |

IQAC Co-ordinator
GSS College, Belagavi

..2

Principal
G. S. Sc. College, Belagavi

Scanned with AnyScanner

| | | |
|---|---|---|
| ಎಂ.ಎಸ್ಸಿ (ಸೂಕ್ಷ್ಮ ಜೀವವಿಜ್ಞಾನ) | ವಿಶ್ವ ವಿದ್ಯಾಲಯದ ಪಠ್ಯಕ್ರಮದಂತೆ ಎಲ್ಲಾ ಕಡ್ಡಾಯ ವಿಷಯಗಳು | 20 |

**ಷರತ್ತುಗಳು:**

(1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ ಅದನ್ನು ಶಾಶ್ವತ ಅನುದಾನರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು;

(2) ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

(3) ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;

(4) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಸಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;

(5) ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

(6) ಕಾಲೇಜು/ಆಡಳಿತ ಮಂಡಳಿಯು ಶೇ. 50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು. ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

(7) ದಿನಾಂಕ: 13.08.1997ರಂದು ವಿಶಾಖ v/s ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ'ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;

(8) ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹರ್ದಯುತವಾಗಿ ಕಾಣತಕ್ಕದ್ದು.

(9) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;

..3

IQAC Co-ordinator
GSS College, Belagavi

Principal
G. S. Sc. College, Belagavi

Scanned with AnyScanner

(10) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು, ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.

(11) ಕ್ಯಾಪಿಟೇಷನ್ ಶುಲ್ಕವನ್ನು ಯವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.

(12) ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ತಮ್ಮ ನಂಬುಗೆಯ

(ಮಹೇಶ್.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

**ಪ್ರತಿ:**
1) ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು- 560 001.
2) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ.
3) ಪ್ರಾಂಶುಪಾಲರು, ದಕ್ಷಿಣ ಕೊಂಕಣ ಶಿಕ್ಷಣ ಸಂಸ್ಥೆಯ ಗೋವಿಂದರಾಮ ಸೆಕ್ಸಾರಿಯಾ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ ಪೋಸ್ಟ್, ಬೆಳಗಾವಿ ತಾಲೂಕು ಮತ್ತು ಜಿಲ್ಲೆ-590006.

Govindram Seksaria Science College
No. 2402
Date 13/7/22
BELGAUM

IQAC Co-ordinator
GSS College, Belagavi

Principal
G. S. Sc. College, Belagavi

Scanned with AnyScanner